





ನಾರ್ಮನ್ ಗ್ಯಾರಿ

# ಜೇನ್ನೊಣಗಳ ಮಿತ್ರ

ಈ ವ್ಯಕ್ತಿಯ ವಯಸ್ಸು ಎಂಬತ್ತರ ಆಜುಬಾಜು. ಆದರೂ ಕುಂದದ ಜೀವನೋತ್ಸಾಹ. ಇವರ ಮನೆಯಂಗಳದಲ್ಲಿ ಹತ್ತಾರು ಜೇನ್ನೊಣಗಳ ಪೆಟ್ಟಿಗೆಗಳಿವೆ. ಇವರು ಅದರ ಬಳಿಗೆ ಹೋಗಿ ನಿಂತು ಪೆಟ್ಟಿಗೆಯ ಬಾಗಿಲನ್ನು ತೆರೆಯುತ್ತಾರೆ. ಮರುಕ್ಷಣವೇ ಗೂಡಿನೊಳಗಿಂದ ರೊಂಯ್ ಎಂದು ಹಾರುತ್ತ ಬಂದ ರಾಣಿ ನೊಣ ಇವರ ಮೇಲೆ ಕುಳಿತುಕೊಳ್ಳುತ್ತದೆ. ಅದನ್ನು ಹಿಂಬಾಲಿಸಿ ಬಂದ ಸಾವಿರಾರು ಜೇನು ನೊಣಗಳು ಮೈಮೇಲೆ ಬಿಡಾರ ಹೂಡುತ್ತವೆ. ನೊಣಗಳ ಸಂಖ್ಯೆ ನೂರಾಗಿ ಸಾವಿರವಾಗಿ ಎಪ್ಪತ್ತೈದು ಸಾವಿರದಿಂದ ಒಂದು ಲಕ್ಷವನ್ನು ತಲುಪುತ್ತದೆ. ಇಡೀ ಮೈ ಜೇನ್ನೊಣಗಳಿಂದ ಮುಚ್ಚಿ ಹೋದರೂ ಇವರು ವಿಚಲಿತರಾಗುವುದಿಲ್ಲ. ಒಂದು ನೊಣವೂ ಕೆರಳಿ ಇವರಿಗೆ ಕಚ್ಚುವುದಿಲ್ಲ. ಸವಾರಿ ಸಾಕೆನಿಸಿದಾಗ ನೊಣಗಳ ಹಿಂಡು ಮರಳಿ ಗೂಡು ಸೇರುತ್ತದೆ.

ಇಷ್ಟೇ ಅಲ್ಲ, ಇವರು ತಮ್ಮ ಬಾಯಿಯೊಳಗೆ ಹತ್ತು ಸೆಕೆಂಡುಗಳ ಕಾಲ 109 ಜೇನ್ನೊಣಗಳನ್ನು ಹಾಕಿ ಬಾಯಿ ಮುಚ್ಚಿ ಬಳಿಕ ಜೀವಂತವಾಗಿ ಹೊರಗೆ ಬಿಡುತ್ತಾರೆ. ಆಗಲೂ ನೊಣಗಳಿಂದ ಇವರಿಗೆ ಹಾನಿಯಿಲ್ಲ. ಇವರ ಈ ಸಾಹಸ ಗಿನ್ನೆಸ್ ವಿಶ್ವದಾಖಲೆಯಲ್ಲೂ ಜಾಗ ಪಡೆದಿದೆ.

ಯಾರು ಈ ಜೇನ್ನೊಣಗಳ ಪರಮಮಿತ್ರ ಎಂದಿರಾ? ಇವರೇ ನಾರ್ಮನ್ ಗ್ಯಾರಿ. ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು 32 ವರ್ಷಗಳ ಬೋಧನಾ ವೃತ್ತಿಯಿಂದ 1994ರಲ್ಲಿ ನಿವೃತ್ತರಾದವರು. ಆದರೆ ತನ್ನ 26ನೆಯ ವಯಸ್ಸಿನಿಂದ ಜೇನ್ನೊಣಗಳ ಬದುಕಿನ ಅಧ್ಯಯನಕ್ಕಾಗಿ ಅವುಗಳನ್ನು ಸ್ವತಃ ಸಾಕುತ್ತ ಒಡನಾಡಿಕೊಂಡು ಬಂದವರು. ಕಾರ್ನೆಲ್ ಮತ್ತು ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯಗಳಲ್ಲಿ ಜೇನ್ನೊಣಗಳ ಜೀವನಕ್ರಮಗಳ ಬಗೆಗೆ ಸತತ ಅಧ್ಯಯನ ಮುಂದುವರೆಸಿ ಪಿಎಚ್‌ಡಿ ಪದವಿ ಗಳಿಸಿ ಅವುಗಳ ಅದೆಷ್ಟೋ ರಹಸ್ಯಗಳನ್ನು ಬಯಲು ಮಾಡುವ ಪುಸ್ತಕಗಳನ್ನೂ ಬರೆದವರು. 'ಮನುಷ್ಯನ ಫೋಬಿಯಾ ರೋಗ ನಿವಾರಣೆಯ ಮಹತ್ವದ ಚಿಕಿತ್ಸೆಗೆ ಜೇನ್ನೊಣಗಳ ಉಪಯೋಗ ಫಲಕಾರಿ' ಎನ್ನುತ್ತಾರೆ ನಾರ್ಮನ್.

ಜೇನ್ನೊಣಗಳ ಬದುಕಿನ ಬಗೆಗೆ ಸಾಕಷ್ಟು ಹೇಳಬಲ್ಲ ವಿಶ್ವದ ಪ್ರಮುಖ ತಜ್ಞ ಎನಿಸಿಕೊಂಡಿರುವ ನಾರ್ಮನ್ ಮೈತುಂಬ ಅವುಗಳನ್ನು ಲಕ್ಷದ ಸಂಖ್ಯೆಯಲ್ಲಿ ಹರಡಿಕೊಳ್ಳುವುದರ ರಹಸ್ಯವನ್ನು ಬಿಚ್ಚಿಡುತ್ತಾರೆ. ರಾಣಿ ನೊಣವನ್ನು ಆಕರ್ಷಿಸುವ ಕೃತಕ ಫೆರೋಮೋನ್ ತನ್ನ ದೇಹಕ್ಕೆ ಬಳಿದುಕೊಂಡಾಗ ರಾಣಿ ನೊಣ ಓಡೋಡಿ ಬಂದು ಅಲ್ಲಿ ಕುಳಿತುಕೊಳ್ಳುತ್ತದೆ. ಅದನ್ನು ಹಿಂಬಾಲಿಸಿ ಉಳಿದವು ಬರುತ್ತವೆ. ದೇಹದ ಒಂದು ಭಾಗದಲ್ಲಿ ಅವು ಹರಡಿದಾಗ ದೇಹವನ್ನು ತೊಂಬತ್ತು ಡಿಗ್ರಿಗೆ ವಾಲಿಸಿ ಇನ್ನೊಂದು ಬದಿಗೂ ಹರಡುವಂತೆ ಮಾಡುತ್ತಾರೆ. ಬಾಯಿಯೊಳಗೆ ಕೃತಕ ಮಕರಂದವನ್ನು ಲೇಪಿಸಿ ನೊಣಗಳನ್ನು ಒಳಗೆ ಬರುವಂತೆ ಆಹ್ವಾನಿಸುತ್ತಾರೆ.

'ಜೇನುನೊಣಗಳನ್ನು ಆಕರ್ಷಿಸಲು ಸಕ್ಕರೆ ಬೆರೆಸಿದ ಪುದಿನಾದ ಸುಗಂಧ ಅತ್ಯಂತ ಉಪಯುಕ್ತ' ಎನ್ನುವ ನಾರ್ಮನ್ ಅವರ ಜೇನು ಒಡನಾಟದ ದೃಶ್ಯಗಳನ್ನು ಹಲವು ಬಾಲಿವುಡ್ ಚಿತ್ರಗಳು ಬಳಸಿಕೊಂಡಿವೆ. ಟಿವಿ ಚಾನೆಲ್‌ಗಳಲ್ಲಿ ಇವರ ಬಗ್ಗೆ 70ಕ್ಕೂ ಹೆಚ್ಚು ಕಾರ್ಯಕ್ರಮಗಳು ಪ್ರಸಾರವಾಗಿವೆ. ಜೇನು ಸಾಕಣೆ ಮಾಡುವವರಿಗಾಗಿ ಉಪಯುಕ್ತ ಪುಸ್ತಕಗಳನ್ನೂ ಬರೆದಿದ್ದಾರೆ. ಹಲವು ಅಂತಾರಾಷ್ಟ್ರೀಯ ಪ್ರಶಸ್ತಿಗಳೂ ಇವರಿಗೆ ಬಂದಿವೆ. ಇವರ ಇನ್ನೊಂದು ಹವ್ಯಾಸ ಕ್ಲಾರಿಯೊನೆಟ್ ವಾದನ. ಮೈತುಂಬ ಜೇನ್ನೊಣಗಳಿರುವಾಗಲೂ ಸಂಗೀತ ನುಡಿಸುತ್ತಾ ಅವುಗಳಿಗೆ ಖುಷಿ ನೀಡುತ್ತಾರೆ.

■ ಪ.ರಾಮಕೃಷ್ಣ ಶಾಸ್ತ್ರಿ